# ನೀವು ಕೇಳಿದಿರಿ?

ರಾಧಾಕೃಷ್ಣ ಬಾಯರಿ, ಕುಂದಾಪುರ

*ಅಂದು ಅಭಿನವ ಭಾರ್ಗವ, ಸಾಹಸಸಿಂಹ ಎಂಬ ಬಿರುದುಗಳು; ಇಂದು ಗೋಲ್ಡನ್ ಸ್ಟಾರ್, ಪವರ್*



*ಸ್ಟಾರ್. ಮುಂದೆ...?*

ಉಲ್ಟಾ ಸ್ಟಾರ್, ಪಲ್ಟಿ ಸ್ಟಾರ್, ಢಮಾರ್!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ನೂರೆಂಟು ಆಸೆ, ಒಂದೂ ಈಡೇರಲಿಲ್ಲ; ಏನ್ ಮಾಡ್ಲಿ?*

109ನೆಯದನ್ನು ಆಸೆ ಪಡಿ.

ಎಸ್.ಜಿ.ಆರ್.ರೆಡ್ಡಿ, ಗೌರಿಬಿದನೂರು

*ಮನುಷ್ಯ ಸತ್ತಮೇಲೆ ವೈಕುಂಠ, ತಿಥಿಗಳನ್ನು ಅದ್ಧೂರಿಯಿಂದ ಆಚರಿಸುವುದರ ಅರ್ಥವೇನು?*

ಸತ್ತವನು ಒಳ್ಳೆಯ ಆಸ್ತಿ ಬಿಟ್ಟುಹೋಗಿದ್ದಾನೆಂದು!

ಕೆ.ಚಂದ್ರಶೇಖರ, ಬೆಂಗಳೂರು

*ಹೋದ ಜನ್ಮದಲ್ಲಿ ನಾನು ನಿನ್ನ ಶಿಷ್ಯನಾಗಿದ್ದೆ ನಿಜ. ಆದರೆ ಈ ಜನ್ಮದಲ್ಲಿ ಏಕೆ ಸೇಡು ತೀರಿಸಿಕೊಳ್ಳುತ್ತಿದ್ದೀಯೋ ಶಿಷ್ಯಾ?*

ಮೋಕ್ಷ ಸಿಗಕ್ಕೆ ಪಾಪ–ಪುಣ್ಯದ ಬ್ಯಾಲೆನ್ಸ್ ಷೀಟ್ ಟ್ಯಾಲಿ ಆಗಬೇಕಲ್ಲಾ ಗುರುವೇ.

ಪಿ.ಜೆ.ರಾಘವೇಂದ್ರ, ಮೈಸೂರು

*ಇಲ್ಲೊಬ್ಬ ಊರು ಹೋಗು ಅನ್ನುತ್ತೆ, ಪಾರ್ಕು ಬಾ ಅನ್ನುತ್ತೆ ಅನ್ನುತ್ತಿದ್ದಾನಲ್ಲಾ...?*

ಊರಾಚೆಯ ಟೆಕ್ನಾಲಜಿ ಪಾರ್ಕ್‌ನಲ್ಲಿ ಕೆಲಸ ಮಾಡುವವನಿರಬೇಕು!

ಎ.ಕೆ.ಪಟ್ಟಾಭಿ, ಬೆಂಗಳೂರು

*ನಶ್ಯದ ಡಬ್ಬಿ ಸೀನುವುದಿಲ್ಲ ಎಂಬಂತೆ ಹಾಸ್ಯ ಮಾಡುವ ವ್ಯಕ್ತಿ ನಗುವುದಿಲ್ಲ ಎನ್ನುವರಲ್ಲಾ..?*




ನಿಜ. ನಗಲೆಂದೇ ಲಾಫ್ ಟ್ರ್ಯಾಕ್‌ಗಳನ್ನು ಅಳವಡಿಸಿರುತ್ತಾರಲ್ಲಾ!

ಎಂ.ಜಿ.ಶಿವರಾಂ, ಬೆಂಗಳೂರು

*ನಿಮಗೆ ರಾಜಕಾರಣಿ ಸಾಹಿತಿ ಇಷ್ಟವೋ, ಸಾಹಿತಿ ರಾಜಕಾರಣಿ ಇಷ್ಟವೋ?*

ಒಂದು ಅನಿಷ್ಟ, ಮತ್ತೊಂದು ಕನಿಷ್ಠ; ಎರಡೂ ಇಷ್ಟಕ್ಕಿಂತ ಕಷ್ಟವೇ ಹೆಚ್ಚು!

ಎ.ಎಸ್.ಸ್ವಾಮಿ, ಸುರಪುರ

*ಸಂಬಂಧಗಳ ಪ್ರೀತಿಯ ಬಳ್ಳಿ ಬಾಡದಿರಬೇಕೆಂದರೆ...?*

ಸಹಕಾರದ ಮಣ್ಣಿಗೆ ಸಹಬಾಳ್ವೆಯ ಗೊಬ್ಬರ ಬೆರೆಸಿ ವಿಶ್ವಾಸದ ನೀರನ್ನು ಎರೆಯಬೇಕು.

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಕೆಲ ಮನೆಗಳಲ್ಲಿ ರಾತ್ರಿಯೇ ಜಗಲಿ ಸಾರಿಸಿ ರಂಗೋಲಿ ಹಾಕಿಬಿಡುತ್ತಾರಲ್ಲಾ...?*

ನಾಳಿನದನ್ನು ಇಂದು ಮಾಡಿ; ಇಂದಿನದನ್ನು ಈಗಲೇ ಎಂಬುದನ್ನು ನಂಬಿದವರಿರಬೇಕು!

ಜೀವ, ಮಳ್ಳೂರು

*ಗೌಡರಿಗೆ ಇದ್ದಕ್ಕಿದ್ದಂತೆ ಕಾವಿ ಧರಿಸಬೇಕು ಎನಿಸಿತಂತೆ?*

ಮಠಗಳಲ್ಲೂ ಎಲೆಕ್ಷನ್ ನಡೆಯಲಿದೆಯೋ ಏನೋ...

ಎಂ.ಆರ್.ಪವನಕುಮಾರ್, ಬಳ್ಳಾರಿ

*ಹುಚ್ಚಿಗೂ ಮತ್ತು ಸಿಟ್ಟಿಗೂ ಏನು ವ್ಯತ್ಯಾಸ?*

ರೂಪ ಕಂಡಾಗ ಹುಚ್ಚು, ಕುರೂಪ ಕಂಡಾಗ ಸಿಟ್ಟು.

ಮಾಲತಿರಾಜು, ಬೆಂಗಳೂರು

*ಬಸ್ಸಿನಲ್ಲಿ ಮಹಿಳಾ ಮೀಸಲಾತಿ ಜಾಗದಲ್ಲಿ ಕುಳಿತ ಗಂಡಸರು ಕಿಟಕಿ ಕಡೆ ಮುಖ ಮರೆಸಿಕೊಳ್ಳುವುದೇಕೆ?*

ಆ ಕಡೆ ತಿರುಗಿಕೊಂಡಿದ್ದರೆ ಅವರು ಹೆಂಗಸರಂತೆ ಕಾಣುವರೆಂಬ ಭ್ರಮೆ!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ

*ಕಾಲುದಾರಿಯಲ್ಲಿ ಹುಲ್ಲು ಬೆಳೆಯುವುದಿಲ್ಲ; ರಾಜಕೀಯದಲ್ಲಿ?*

ಮಂತ್ರಿಯ ಹೊಟ್ಟೆ, ಹಗರಣ ಬಿಟ್ಟು ಏನೇನೂ ಬೆಳೆಯುವುದಿಲ್ಲ.

ಮಹೇಶ್ ಹೆಗಡೆ, ಹೆಗ್ಲೆ

*ರಾಜಕಾರಣಿಯನ್ನೂ, ರಾಜಕೀಯವನ್ನೂ ಟೀಕಿಸುವ ಪ್ರಶ್ನೆಗಳ ಮೇಲೆ ನಿಷೇಧ ಹೂಡಿದರೆ?*

ಜನರಿಗೆ ಮನರಂಜನೆಯೇ ಇಲ್ಲವಾಗುತ್ತದೆ.

ಕೇಶವ ಎನ್. ಪೈ, ಹೊನ್ನಾವರ

*ಪ್ರೀತಿ ದೊಡ್ಡದೋ, ಪ್ರೀತಿಸುವವನು ದೊಡ್ಡವನೋ?*

ಪ್ರೀತಿಯೇ; ಅದು ಬಹುರೂಪಿ, ಜಗವ್ಯಾಪಿ!

ಮೇಟಿ ಕೊಟ್ರಪ್ಪ, ಬಸರಕೋಡು

*ನೀವು ಪ್ರಶ್ನೆಯ ಮೇನಿಯಾದಲ್ಲಿ ಬಂಧಿಯಾ?*

ಪ್ರಶ್ನೆ–ಪ್ರಶ್ನೆಗಳ ಪದಾರ್ಥ, ಪರಾರ್ಥ, ಪದರ ಪದರಗಳ ಪರಮಾರ್ಥ ಪದಪದಕ್ಕೂ ಪರಮಹಿತವಲ್ತೆ!

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಣ್ಣ, ಮಾತೃಭಾಷೆ ಅಂತಾರೆ, ಪಿತೃಭಾಷೆ ಅಂತ ಯಾಕಿಲ್ಲ?*

ಕೋಲೆಬಸವನನ್ನು ಕಂಡಿಲ್ಲವೇ..? ಅದರದು ಪಿತೃಭಾಷೆಯೇ!

ಎಂ.ಎಸ್.ಧರ್ಮೇಂದ್ರ, ಜಿ.ಟಿ.ಆರ್.ಇ ಕ್ಯಾಂಪಸ್

*ದನಗಳಿಗೆ ಮೂಗುದಾರ ಹಾಕುವ ರೀತಿ ಫ್ಯಾಷನ್‌ಗೆ ಹುಡುಗಿಯರು ಮೂಗಿಗೆ ರಿಂಗ್ ಹಾಕಿಕೊಳ್ಳುವುದರ ಗುಟ್ಟೇನು?*

ಮೂಗ ಭಾಷೆಯಲ್ಲಿ ತಾವು ಹಸುವಿನಂತಹವರು ಎಂದು ತೋರಿಸುವ ಪರಿಯಂತೆ!

ರಮಾನಂದಶರ್ಮಾ, ಬೆಂಗಳೂರು

*ಈ ದೇಶಕ್ಕೆ ಮಧ್ಯರಾತ್ರಿಯ ಬದಲು ಮುಂಜಾನೆ ಸ್ವಾತಂತ್ರ್ಯ ಸಿಕ್ಕಿದ್ದಿದ್ದರೆ?*



ಸ್ವಾತಂತ್ರ್ಯ ಪಡೆದ ಕಾಲವಲ್ಲ, ಖಳ ಮುಖ್ಯ. ಖಳ ಬದಲಾದರೆ ಕಾಲ ಬದಲಾದೀತು!

ಮಹೇಶ್ ಹೆಗಡೆ, ಹೆಗ್ಲೆ

*ಕಳ್ಳರ ಕೈಗೆ ಕೀ ಕೊಡುವುದಕ್ಕಿಂತಲೂ, ಭೂಗಳ್ಳರ ಕೈಗೆ ಅಧಿಕಾರ ಕೊಡುವುದು ಅಪಾಯಕಾರಿಯಲ್ಲವೇ?*

ಹಣ, ಹೆಂಡ ಆರಿಸಿದ ಖುರ್ಚಿಯಿಂದ ಚೌರ್ಯವಲ್ಲದೆ ಕಾರ್ಯ ನಿರೀಕ್ಷಿಸಲಾಗದಲ್ಲ!

ನಾರಾಯಣ, ಗುಗ್ಗರಹಟ್ಟಿ

*ಸಾವಿರ ಸುಳ್ಳು ಹೇಳಿ ಮಾಡಿದ ಮದುವೆ ಒಮ್ಮೊಮ್ಮೆ ತಾಳಿ ಕಟ್ಟುವ ಸಮಯದಲ್ಲೇ ನಿಂತುಹೋಗುತ್ತಲ್ಲಾ?*

ಆ ಸಮಯದಲ್ಲಿ ಒಂದೇ ಒಂದು ನಿಜ ಹೇಳಿದರೆ ಸಲ್ಲುವ ಶಿಕ್ಷೆಯದು!

ಅಮರಯ್ಯ, ಶೋರಾಪುರ

*ಮದುವೆ ಒಂದು ಬಂಧನವೋ; ಅನುಬಂಧವೋ?*

ಅದು ರಾಸಾಯನಿಕಗಳ ಪ್ರಯೋಗಶಾಲೆ; ಕೆಲವು ಹೊಂದುತ್ತವೆ, ಕೆಲವು ಸ್ಫೋಟಗೊಳ್ಳುತ್ತವೆ.

■ ರಾಮ್